ಹಾಕಿದ. ಅಕ್ಕಪಕ್ಕ ಮನೆ ಇತ್ತೋ ಏನೋ, ಆ ಕತ್ತಲಲ್ಲಿ ಗೊತ್ತಾಗಲಿಲ್ಲ. ಒಳ ಬಂದರೆ ಅದು ಸಂಸಾರಸ್ಥರ ಮನೆಯಂತೆ ಕಾಣಿಸಲಿಲ್ಲ. ಹಾಗಂತ ಕಚೇರಿ ಲಕ್ಷಣವೂ ಇರಲಿಲ್ಲ. ಯಾವುದೋ ಐಬಿ ಇರಬಹುದೆ ಎಂದು ಯೋಚಿಸಿದ. ಅಲ್ಲಿ ಇನ್ನೂ ಮೂವರಿದ್ದರು. ತನ್ನನ್ನು ಹೆಡೆಮುರಿಕಟ್ಟಿ ಕರೆತಂದವರ ಮುಖ ನೆನಪಿಸಿಕೊಳ್ಳಲು ಯತ್ನಿಸಿದ. ಬಸ್ ಅಡ್ಡಗಟ್ಟಿದವರಲ್ಲಿ ಒಬ್ಬರನ್ನು ಹೊರತಾಗಿಸಿ ಉಳಿದವರು ಕಾಣಿಸಲಿಲ್ಲ. ತನ್ನನ್ನು ಎಳೆದು ತಂದವರು ಅಲ್ಲಿದ್ದವರಿಗೆ ಸಲ್ಯೂಟ್ ಹೊಡೆದ ರೀತಿ ನೋಡಿದ ರೋಹಿತ್‌ಗೆ ಅವರ ಸೀನಿಯರ್ಸ್ ಅವರಿರಬೇಕು ಎನಿಸಿತು. ಎಳೆದು, ಒದ್ದು ಮುಸುಡಿ ಒಡೆದವರ ಒರಟು ಅನಾಗರಿಕ ವರ್ತನೆ ಇವರಲ್ಲಿ ಕಾಣಿಸಲಿಲ್ಲ. ಮುಖ್ಯಸ್ಥನಂತೆ ಕಾಣಿಸುತ್ತಿದ್ದವನ ಆದೇಶದ ಮೇರೆಗೆ ರೋಹಿತ್‌ಗೆ ಬಿಸ್ಕಿಟ್-ಚಹಾ ಸರಬರಾಜಾಯಿತು. ಕಂಪೆನಿ ಕೊಡುವವನಂತೆ ಮುಖ್ಯಸ್ಥನೂ ಬಿಸ್ಕಿಟ್ ಚಹಾ ಸೇವಿಸಿ ರಾಹುಲ್‌ನತ್ತ ಮುಗುಳ್ನಗುತ್ತ 'ಈಗ ಮಲಗು ಬೆಳಗ್ಗೆ ಮಾತಾಡೋಣ' ಎನ್ನುತ್ತ ತನ್ನ ರೂಮೊಳಗೆ ತೂರಿಕೊಂಡ. ಕಣ್ಣಪಟ್ಟಿ ಬಿಚ್ಚಿದರೂ ವಾಚು ನೋಡುವುದನ್ನೇ ಮರೆತಿದ್ದ ರೋಹಿತ್ ಸಮಯ ನೋಡಿದ. ಬರೋಬ್ಬರಿ ಬೆಳಗಿನ ಝಾವದ ಐದು ಘಂಟೆ. ಅಂದರೆ ಮೂರ್ನಾಲ್ಕು ತಾಸಾದರೂ ತನ್ನನ್ನು ಸುತ್ತಾಡಿಸಿದ್ದಾರೆಂದುಕೊಂಡ. ಆಫೀಸರ್‌ನ ಗಮನ ಸೆಳೆಯಲು ರೋಹಿತ್ 'ಸರ್' ಎಂದ. ಆತ ತಿರುಗಿಯೂ ನೋಡಲಿಲ್ಲ. ಅಲ್ಲಿದ್ದವನೊಬ್ಬ 'ಅಲ್ಲಿ ಮಲಗು' ಎಂದು ಮೂಲೆಯಲ್ಲಿದ್ದ ಮಂಚದತ್ತ ಕೈತೋರಿಸಿ ಲೈಟ್ ಆಫ್ ಮಾಡಿದ. ಮತ್ತದೇ ಘನಘೋರ ಕತ್ತಲೆ. ಮೂರು ರಾತ್ರಿ ಮೂರು ಹಗಲು ಮಲಗಿ ನಿದ್ರಿಸಿದರೂ ಪರಿಹಾರ ಆಗದಷ್ಟು ಬಳಲಿದ್ದ ರೋಹಿತ್‌ಗೆ ನಿದ್ರೆ ಯಾವಾಗ ಆವರಿಸಿತೋ ಗೊತ್ತಾಗಲಿಲ್ಲ.

ನಿದ್ರೆಗೆ ಜಾರಿದವನು ದುಃಸ್ವಪ್ನ ಕಂಡವನಂತೆ ಬೆಚ್ಚಿ ಎಚ್ಚರಗೊಂಡ. ಮೈ ಬೆವರಿತ್ತು. ಮೇಲೆ ನೋಡಿದ ಫ್ಯಾನು ನಿಧಾನವಾಗಿ ತಿರುಗುತ್ತಿತ್ತು. ತಾನು ಎಲ್ಲಿದ್ದೇನೆ ಮತ್ತದೇ ಪ್ರಶ್ನೆ ಅವನನ್ನು ಕಾಡಿತು. ತನ್ನನ್ನು ಬಸ್ಸಿನಿಂದಿಳಿಸಿ ದರದರ ಎಳೆದುತಂದದ್ದೆಲ್ಲ ಚಕಚಕನೆ ಕಣ್ಣ ಪರದೆಯ ಮೇಲೆ ಓಡಿತು. ಹೌದು, ತಾನೇನು ಮಾಡಿದೆ ಎಂದು ಎಳೆದು ತಂದಿದ್ದಾರೆ, ಅಸಲಿಗೆ ಇವರ ಉದ್ದೇಶವಾದರೂ ಏನೆಂದು ಮತ್ತೆ ಮತ್ತೆ ಕೇಳಿಕೊಂಡ. 'ನೋವಿರುವ ಹಲ್ಲಿನತ್ತ ಪದೇ ಪದೇ ಹೊರಳುವ ನಾಲಗೆಯಂತೆ...' ಗಿರೀಶ ಕಾರ್ನಾಡ್ ಅವರ 'ತಲೆದಂಡ' ನಾಟಕದ ಸಾಲು ನೆನಪಾಯಿತು. ತನ್ನ ಬ್ಯಾಗ್ನಲ್ಲಿ ಇತ್ತಾದರೂ ಏನು... ಎಷ್ಟು ಯೋಚಿಸಿದರೂ ಸಂದೇಹ ಪರಿಹಾರವಾಗಲಿಲ್ಲ. ಜಗ್ನಲ್ಲಿಟ್ಟಿದ್ದ ನೀರನ್ನು ಗಟಗಟ ಕುಡಿದು ಸಾವರಿಸಿಕೊಂಡ. ಹೌದು ಅಲ್ಲ ಎಂಬಂತೆ ಝೀರೋ ಕ್ಯಾಂಡಲ್ ಬಲ್ಬ್ ಚೆಲ್ಲುತ್ತಿದ್ದ ಮಂದ ಬೆಳಕು ಬಚ್ಚಲಮನೆಗೆ ದಾರಿ ತೋರಿತು. ಹೋಗಿ ಬಂದ. ಕಿಟಕಿಯನ್ನು ತೆರೆಯುವ ಯತ್ನ ಮಾಡಿದ, ಆದರೆ ಬಾಗಿಲು ಸೀಲ್ ಆದಂತೆ ಭದ್ರವಾಗಿದ್ದವು. ಹಳೆಕಾಲದ ರೂಮು, ನಾಲ್ಕು ಗೋಡೆಯೊಳಗೆ ಬಂಧಿ ತಾನೆಂದು ಖಚಿತಪಡಿಸಿಕೊಂಡ. ವ್ಯರ್ಥ ಸಾಹಸಕ್ಕೆ ಹೋಗದೆ ಮಂಚದ ಮೇಲೆ ಮತ್ತೆ ಶಿವಾ ಎಂದು ಮುರುಡಿ ಉರುಳಿದ. ಬೆಳಗಿನ ಝಾವದ ನಿದ್ರೆ ಆವರಿಸಿತು. ಮೈ ಅಲುಗಾಡಿದಂತಾಗಿ ಕಣ್ತೆರೆದ. ಫಳ ಫಳ ಹೊಳೆಯುತ್ತಿದ್ದ ಟಿಪ್ಟಾಪ್ ತರುಣ 'ಚಹಾ' ಎಂದ. ಜೊತೆಗೆ ಬಿಸ್ಕಿಟ್ ಇತ್ತು.

ಬನಿಯನ್ನಲ್ಲಿ ಮಲಗಿದ್ದ ರೋಹಿತ್ ಮುಖಕ್ಕೆ ನೀರೆರಚಿ ಚಹಾ-ಬಿಸ್ಕಿಟ್ ಸೇವಿಸುತ್ತಿರುವಾಗಲೇ 'ಬೆಳಗ್ಗೆ ಮಾತಾಡೋಣ'ಎಂದಿದ್ದ ಅಧಿಕಾರಿ ನಸುನಗುತ್ತ ಒಳಬಂದ. ನಿದ್ರೆ ಚೆನ್ನಾಗಿ ಆಯಿತೇ ಎಂದು ಉಪಚರಿಸಿದ ಆತನ ಮುಂದೆ ಸಹಾಯಕನೊಬ್ಬ ರೋಹಿತ್‌ನ ಬ್ಯಾಕ್‌ಪ್ಯಾಕ್ ಚೀಲ ತಂದಿರಿಸಿದ. ಇನ್ನೊಬ್ಬ ಸಹಾಯಕ ಎಲ್ಲವನ್ನೂ ವಿಡಿಯೋ ಮಾಡಲು ತಯಾರಾದ. ಸಿಕ್ಕಿಹಾಕಿಸಿಕೊಳ್ಳುವುದು ಬೇರೆ, ಸಿಕ್ಕಿ ಹಾಕಿಸುವುದು ಬೇರೆ... ತನ್ನದು ಯಾವ ವರ್ಗ, ರೋಹಿತ್ ಮಂಡೆ ಬಿಸಿಯಾಯಿತು. ಅಧಿಕಾರಿ ಬ್ಯಾಕ್‌ಪ್ಯಾಕ್ ತೆರೆದ. ಅದರೊಳಗಿಂದ ದಪ್ಪ ಪ್ಲಾಸ್ಟಿಕ್ ಚೀಲವನ್ನೆತ್ತಿದ. ಅರೆ ಈ ಚೀಲ ತನ್ನದಲ್ಲ; ಪಕ್ಕದ ಸೀಟಿನವ ದಾಂಡೇಲಿಯಲ್ಲಿ ಬಸ್ಸೇರಿ ತನ್ನ ಪಕ್ಕ ಕುಳಿತಾಗ ಚಿಕ್ಕ ಮಗುವನ್ನೆತ್ತಿಕೊಂಡಂತೆ ಆ ಚೀಲವನ್ನು ಎದೆಗೊತ್ತಿಕೊಂಡು ಹಿಡಿದಿದ್ದ ಎನ್ನುವುದು ಫ್ಲಾಷ್ ಬ್ಯಾಕ್ ರೀತಿ ಸುರಳಿ ರೋಹಿತ್‌ನಲ್ಲಿ ಬಿಚ್ಚಿಕೊಂಡಿತು. ಅಷ್ಟರಲ್ಲಿ ಅಧಿಕಾರಿ ಪ್ಲಾಸ್ಟಿಕ್ ಚೀಲದಿಂದ ಏನನ್ನೋ ತೆಗೆಯಲು ಹವಣಿಸಿದ. ರೋಹಿತ್‌ನ ಮುಖ ಮೈ ಬೆವೆತು ಅಂಗಾಂಗವೆಲ್ಲವೂ ತೊಯ್ದವು. ಮರು